ಈ) ಹಾಗಿದ್ದಲ್ಲಿ, ಮೇಲ್ಕಂಡ ಠಾಣೆಗಳನ್ನು ಮೇಲ್ದರ್ಜೆಗೇರಿಸುವ ಮೂಲಕ ಆ ಭಾಗದ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಡಲಾಗುವುದೇ?

ಶ್ರೀ ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಹೌದು.

ಆ) ಹಣಕಾಸಿನ ಲಭ್ಯತೆಯನ್ನನುಸರಿಸಿ ಈ 2 ಪೊಲೀಸ್ ಉಪ ಠಾಣೆಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಪರಿಶೀಲಿಸಲಾಗುವುದು.

ಇ) ಬಂದಿದೆ.

ಈ) ಪರಿಶೀಲಿಸಲಾಗುವುದು.

730 ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) : ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09ನೇ ಸಾಲಿನಲ್ಲಿ ವಕೀಲರ ಸಂಘಗಳಿಗೆ ಕಾನೂನು ಪುಸ್ತಕ, ಪೀಠೋಪಕರಣ ಖರೀದಿಸಲು ಕರ್ನಾಟಕ ಗ್ರಾಂಟ್ ಇನ್ ಏಡ್ ಟು ಬಾರ್ ಅಸೋಸಿಯೇಷನ್ ರೂಲ್ಸ್ 1983ರ ಅನ್ವಯ ಸಹಾಯಧನ ಹಂಚಿಕೆ ಮಾಡಿ ಆದೇಶ ಹೊರಡಿಸಿರುವುದು ನಿಜವಲ್ಲವೇ?

ಆ) ಉಡುಪಿ ಜಿಲ್ಲೆಯ ವಕೀಲರ ಸಂಘಗಳಿಗೆ 2008–09ರ ಸಾಲಿನ ಸಹಾಯಧನ ಬಿಡುಗಡೆಯಾಗದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಅನುದಾನ ಬಿಡುಗಡೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಈ) 2009–10ನೇ ಸಾಲಿನಲ್ಲಿಯೂ ವಿವಿಧ ವಕೀಲರ ಸಂಘಗಳಿಗೆ ಅನುದಾನ ಹಂಚಿಕೆಯಾದರೂ ಬಿಡುಗಡೆ ಮಾಡದಿರಲು ಕಾರಣವೇನು; ಯಾವಾಗ ಬಿಡುಗಡೆ ಮಾಡಲಾಗುವುದು;

ಉ) ಈ ಅನುದಾನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

(ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಬಿಡುಗಡೆ ಮಾಡಿರುವ ಲೆಕ್ಕಶೀರ್ಷಿಕೆಯಲ್ಲಿ ಹಣದ ಕೊರತೆ ಉಂಟಾಗುವುದರಿಂದ ಹೆಚ್ಚುವರಿ ಅನುದಾನ ಬಯಸಿ, ಉಚ್ಚ ನ್ಯಾಯಾಲಯದಲ್ಲಿ ಖಜಾನೆಗೆ ಹಣ ಬಿಡುಗಡೆ ಮಾಡಿರುವುದಿಲ್ಲವೆಂದು ತಿಳಿಸಿ, ಹೆಚ್ಚುವರಿ ಅನುದಾನ ನೀಡುವಂತೆ ಕೋರಿದ್ದರ ಮೇರೆಗೆ ಆರ್ಥಿಕ ಇಲಾಖೆಯೊಡನೆ ಸಮಲೋಚಿಸಿ, ಹೆಚ್ಚುವರಿ ಅನುದಾನ ಒದಗಿಸಿದ್ದು, ಸರ್ಕಾರದ ಆದೇಶದನ್ವಯ ಹಣವನ್ನು ಖಜಾನೆಯಲ್ಲಿ ಬಿಡುಗಡೆ ಮಾಡಲು ಉಚ್ಚ ನ್ಯಾಯಾಲಯಕ್ಕೆ ತಿಳಿಸಲಾಗಿದೆ.

ಉ) ಈಗಾಗಲೇ ದಿನಾಂಕ: 18.02.2008ರಂದು ಅನುದಾನ ಮೊತ್ತವನ್ನು ಹೆಚ್ಚಿಸಿ, ತಿದ್ದುಪಡಿ ತರಲಾಗಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ನಿಗದಿಪಡಿಸಿದ ಹಣದ ವಿವರ

653 ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ಮಾನ್ಯ ಗೃಹ ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09, 2009–10 ರಲ್ಲಿ ಆರಾಧನಾ ಯೋಜನೆಯಡಿಯಲ್ಲಿ ಸರ್ಕಾರ ನಿಗದಿಪಡಿಸಿದ ಹಣವೆಷ್ಟು;

ಆ) 2009–10ನೇ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? (ಕ್ಷೇತ್ರವಾರು / ತಾಲ್ಲೂಕುವಾರು ವಿವರ ನೀಡುವುದು);

ಶ್ರೀ ಡಾ: ವಿ.ಎಸ್.ಆಚಾರ್ಯ (ಗೃಹ ಹಾಗೂ ಮುಜರಾಯಿ ಸಚಿವರು) :

ಅ) 2008–09ನೇ ಸಾಲಿನಲ್ಲಿ ರೂ.880.00 ಲಕ್ಷಗಳನ್ನು ನಿಗದಿಪಡಿಸಿದ್ದು, ಯಾವುದೇ ಮೊತ್ತವನ್ನು ಬಿಡುಗಡೆ ಮಾಡಿರುವುದಿಲ್ಲ.